(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ. ಹೇ. ಕೇ. ಸರಿ ಇದೆ,

(ಪ್ರಶಾಂತಿ.ಜಿ)
9ನೇ ಅಪರ ನಗರ ಸಿವಿಲ್ ಮತ್ತು ಸತ್ರ
ನ್ಯಾಯಾಧೀಶರು, ಬೆಂಗಳೂರು.

<u>ದಿ:**18-03-2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.</u>

<u>ಮುಂದುವರಿದ ಪಾಟಿಸವಾಲು : ವಾದಿ ಪರ ಶ್ರೀ. ಬಿ.ಎಸ್.ಎನ್ ವಕೀಲರಿಂದ :</u>

23. ವಾದಿಯ ಮುಖಾಂತರ ಪಾವತಿಯಾದ ಚೆಕ್ಕುಗಳ ಬಗ್ಗೆ ನನ್ನ ಬ್ಯಾಂಕ್ ಸ್ಟೇಟ್ ಮೆಂಟುಗಳನ್ನು ನಾನು ಹಾಜರುಪಡಿಸುತ್ತೇನೆಂದು ನನ್ನ ಕಳೆದ ಬಾರಿಯ ಪಾಟಿ ಸವಾಲಿನಲ್ಲಿ ಹೇಳಿದ್ದು ನಾನು ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸಾಕ್ಷಿ ಮುಂದುವರಿದು ನಾನು ಅವುಗಳನ್ನು ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ.

24. ವಾದಿಯ ಬಳಿ ಕಾರ್ಯಾದೇಶದ ಬಗ್ಗೆ ಯಾವುದೇ ಎಸ್ಟಿಮೇಷನ್ ಇದ್ದಿರಲಿಲ್ಲ ಮತ್ತು ಅದನ್ನು ನಾನು ಹೇಳಿ ತಯಾರು ಮಾಡಿರಲೂ ಇಲ್ಲ ಎಂದರೆ ಸರಿಯಲ್ಲ. ಸಾಮನ್ಯವಾಗಿ ಯಾರು ಕೆಲಸವನ್ನು ಒಪ್ಪಿಕೊಳ್ಳುತ್ತಾರೋ ಅಂತಹ ವ್ಯಕ್ತಿ ಎಸ್ಟಿಮೇಷನ್ ಅನ್ನು

ತಯಾರು ಮಾಡಬೇಕು ಎಂದರೆ ಸರಿ. ಸಾಕ್ಷಿ ಮುಂದುವರಿದು ಈ ದಾವೆಯಲ್ಲಿ ವಾದಿ ನನ್ನ ಬಳಿ ಯಾವುದೇ ಎಸ್ಟಿಮೇಷನ್ ಕೇಳಿಲ್ಲ ಎಂದು ನುಡಿಯುತ್ತಾರೆ.

25. ನಿ.ಪಿ.17 ರಲ್ಲಿ ಕಾಣುತ್ತಿರುವ ಹುಡುಗರು ನನ್ನ ಕೆಲಸಗಾರರು ಅಲ್ಲ. ನಾನು ಈ ಕೆಲಸವನ್ನು ಮಧ್ಯದಲ್ಲಿ ಬಿಟ್ಟ ಕಾರಣ ವಾದಿ ಆ ಕೆಲಸವನ್ನು ಬೇರೆಯವರಿಂದ ಮಾಡಿಸಿದ್ದಾರೆ ಎಂದರೆ ಸುಳ್ಳು. ನಿ.ಪಿ.17 ರಲ್ಲಿ ಕಾಣುತ್ತಿರುವ ಫ್ಯಾಬ್ರಿಕೇಷನ್ ವರ್ಕ್ ದಾವಾ ಸ್ವತ್ತಿನಲ್ಲಿ ಮಾಡಿದ ಫ್ಯಾಬ್ರಿಕೇಷನ್ ವರ್ಕ್ ಎಂದರೆ ಸುಳ್ಳು. ನಿ.ಡಿ.5 ರಿಂದ ನಿ.ಡಿ.22 ರ ಫೋಟೋಗಳಲ್ಲಿ ಕಾಣುತ್ತಿರುವ ಕಟ್ಟಡ ಮತ್ತು ನಿ.ಪಿ.17 ರಲ್ಲಿ ಕಾಣುತ್ತಿರುವ ಕಟ್ಟಡ ಒಂದೇ.

26. ನನ್ನ ಕಳೆದ ಬಾರಿಯ ತನಿಖೆಯಲ್ಲಿ ನಾನು ದಾವಾ ಆಸ್ತಿಯ ಮೇಲೆ ಹಾಕಿದ ಪಪ್ ಶೀಟು ಜೆ.ಎಸ್.ಡಬ್ಲ್ಯೂ ಕಂಪೆನಿಗೆ ಸೇರಿದ ಪಪ್ ಶೀಟುಗಳು ಎಂದು ಹೇಳಿದ್ದು ಜೆ.ಎಸ್.ಡಬ್ಲ್ಯೂ ಕಂಪೆನಿ ಬಿಲ್ಲು ಮತ್ತು ಇನ್ ವಾಯ್ಸ್ ಇಲ್ಲದೇ ಯಾವುದೇ ಸಾಮಾಗ್ರಿಗಳನ್ನು ಕೊಡುವುದಿಲ್ಲ ಎಂದರೆ ಸಾಕ್ಷಿ ಡಿಸ್ಟ್ರಿಬ್ಯೂಟರ್ ಮೂಲಕ ನನ್ನ ಕಂಪೆನಿಗೆ ಬಿಲ್ಲು ಬಂದಿದೆ ಎಂದು ನುಡಿಯುತ್ತಾರೆ. ಡಿಸ್ಟ್ರಿಬ್ಯೂಟರ್ ಮೂಲಕ ನನ್ನ ಕಂಪೆನಿಗೆ ಬಂದ ಬಿಲ್ಲುಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಜೆ.ಎಸ್.ಡಬ್ಲ್ಯೂ ಪಪ್ ಶೀಟುಗಳನ್ನು ಡಿಸ್ಟ್ರಿಬ್ಯೂಟರ್ ಮೂಲಕ ನನ್ನ ಕಂಪೆನಿಗೆ ಯಾವ ತಾರೀಖಿನಂದು ಖರೀದಿಸಿದ್ದೇನೆ ಎಂದು ನನಗೆ ನೆನಪಿಲ್ಲ. ಜೆ.ಎಸ್.ಡಬ್ಲ್ಯೂ ಪಪ್ ಶೀಟುಗಳನ್ನು ಯಾವ

ಡಿಸ್ಟ್ರಿಬ್ಯೂಟರ್ ಮೂಲಕ ನನ್ನ ಕಂಪೆನಿ ಖರೀದಿಸಿದೆ ಎಂದು ನನಗೆ ನೆನಪಿಲ್ಲ. ನಾನು ಯಾವುದೇ ಪಪ್ ಶೀಟುಗಳನ್ನು ಯಾರ ಮೂಲಕವೂ ಖರೀದಿಸಿಲ್ಲ ಮತ್ತು ಅದನ್ನು ದಾವಾ ಆಸ್ತಿಯ ಮಹಡಿಗೆ ಹಾಕಿಲ್ಲ ಆ ಕಾರಣದಿಂದ ನನಗೆ ಆ ಬಗ್ಗೆ ವಿವರಣೆ ನೀಡಲು ಆಗುವುದಿಲ್ಲ ಎಂದರೆ ಸುಳ್ಳು. ಯಾವ ಕಂಪೆನಿಯ ಪಪ್ ಶೀಟುಗಳು ಎಂದು ಪಪ್ ಶೀಟಿನ ಮೇಲೆ ಪ್ರಿಂಟುಗಳು ಬರುತ್ತದೆ ಎಂದರೆ ಸರಿಯಲ್ಲ. ಜೆ.ಎಸ್.ಡಬ್ಲ್ಯೂ ಪಪ್ ಶೀಟುಗಳ ಮೇಲೆ ಮತ್ತು ಅವುಗಳ ಸೈಡಿನಲ್ಲಿ ಅವರ ಕಂಪೆನಿ ಎಂದು ಪ್ರಿಂಟು ಬರುತ್ತದೆ ಎಂದರೆ ಸುಳ್ಳು.

27. ದಾವಾ ಆಸ್ತಿಯ ಮೇಲೆ ಹೊದಿಸಿದ ಶೀಟುಗಳು ಆಲ್ಫಾ ಪೆಬ್ ಲಿಮಿಟೆಡ್ ಕಂಪೆನಿಯ ಶೀಟುಗಳು ಮತ್ತು ಜೆ.ಎಸ್.ಡಬ್ಲ್ಯೂ ಕಂಪೆನಿಯ ಪಪ್ ಶೀಟುಗಳು ಅಲ್ಲ ಎಂದರೆ ಸುಳ್ಳು. ಆಲ್ಫಾ ಪೆಬ್ ಲಿಮಿಟೆಡ್ ಕಂಪೆನಿಯ ಶೀಟುಗಳು ಬೇರೆ ಮತ್ತು ಜೆ.ಎಸ್.ಡಬ್ಲ್ಯೂ ಕಂಪೆನಿಯ ಪಪ್ ಶೀಟುಗಳೇ ಬೇರೆ ಎಂದರೆ ಸರಿ. ದಾವಾ ಆಸ್ತಿಯ ಮೇಲೆ ಹೊದಿಸಿದ ಶೀಟುಗಳು ಜೆ.ಎಸ್.ಡಬ್ಲ್ಯೂ ಕಂಪೆನಿಯ ಪಪ್ ಶೀಟುಗಳು ಅಲ್ಲ ಮತ್ತು ಬೇರೆಯವರು ಮಾಡಿದ ಕೆಲಸಕ್ಕೆ ನಾನೇ ಮಾಡಿದ್ದೇನೆ ಎಂದು ಸಾಧಿಸುತ್ತಿದ್ದೇನೆ ಎಂದರೆ ಸರಿಯಲ್ಲ.

28. ವಾದಿಯ ಕಡೆಯಿಂದ ಹಣವನ್ನು ವಸೂಲು ಮಾಡುವ ಉದ್ದೇಶದಿಂದ ನಿ.ಪಿ.9 ರಿಂದ 11 ರ ಇನ್ ವಾಯ್ಸುಗಳನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.9 ರಿಂದ 11 ರಲ್ಲಿ ವ್ಯಾಟ್ ಚಾರ್ಜುಗಳನ್ನು ಮತ್ತು ಜಿ.ಎಸ್.ಟಿ.ಗಳನ್ನು ಕಟ್ಟಿಲ್ಲ ಎಂದು ವಾದಿಯ

ಕಡೆಯಿಂದ ಕಂಪೆನಿಗೆ ದೂರು ನೀಡಿದ್ದರು ಎಂದರೆ ಸಾಕ್ಷಿ ನಾನು ಎಲ್ಲವನ್ನೂ ಕ್ಲಿಯರ್ ಮಾಡಿದ್ದೇನೆ ಎಂದು ನುಡಿಯುತ್ತಾರೆ. ಇದೇ ದಾವೆಯಲ್ಲಿ ಪ್ರಾ.ಸಾ.2 ನಿ.ಪಿ.9 ರಿಂದ 11 ರಲ್ಲಿ ತೋರಿಸಿದ ಮೌಲ್ಯ ಸರ್ಕಾರಕ್ಕೆ ಪಾವತಿಯಾಗಿಲ್ಲ ಎಂದು ಸಾಕ್ಷಿ ನುಡಿದಿದ್ದಾರೆ ಎಂದರೆ ಸುಳ್ಳು. ನಿ.ಪಿ.9 ರಿಂದ 11 ರ ದಾಖಲೆಗಳನ್ನು ನಾನು ಸೃಷ್ಟಿಸಿದ ಕಾರಣ ವ್ಯಾಟ್ ಹಾಗೂ ಜಿ.ಎಸ್.ಟಿ ಪಾವತಿಯಾಗಿಲ್ಲ ಎಂದರೆ ಸರಿಯಲ್ಲ.

29. ವಾದಿ ಈ ವ್ಯವಹಾರದಲ್ಲಿ ಮಾಡಿದ ಚೆಕ್ಕುಗಳ ಮೂಲಕ ಪಾವತಿಗಳು ಗೊತ್ತಾಗುತ್ತದೆ ಎಂಬ ಕಾರಣಕ್ಕಾಗಿ ನಾನು ನನ್ನ ಬ್ಯಾಂಕಿನ ಸ್ಟೇಟ್ ಮೆಂಟುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸದೆ ಮರೆಮಾಚಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಕೆಲಸಗಳನ್ನು ಸಂಪೂರ್ಣವಾಗಿ ಮಾಡದೆ ಅವರು ನೀಡಿದ ಚೆಕ್ಕುಗಳನ್ನು ಬ್ಯಾಂಕಿಗೆ ಹಾಕಿ ಕಲಂ 138 ರಡಿಯಲ್ಲಿ ಪ್ರಕರಣ ದಾಖಲಿಸಿ ಅವರಿಂದ ಹಣ ವಸೂಲು ಮಾಡಿದ್ದೇನೆ ಎಂದರೆ ಸುಳ್ಳು. ರೂ.2,30,000/-ಗಳು ನಾನು ವಾದಿಗೆ ಕಾನೂನು ಬದ್ಧವಾಗಿ ಕೊಡಬೇಕಾದ ಹಣ ಎಂದರೆ ಸರಿಯಲ್ಲ. ಈ ವ್ಯವಹಾರದಲ್ಲಿ ನಾನು ವಾದಿಯ ಬಳಿಯಿಂದ ಎಸ್ಟಿಮೇಷನ್ನಿಗಿಂತ ಜಾಸ್ತಿಯೇ ಹಣ ವಸೂಲು ಮಾಡಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಗೆ ಪ್ರತ್ಯುತ್ತರವಾಗಿ ನಾನು ಲಘು ವ್ಯವಹಾರಗಳ ನ್ಯಾಯಾಲಯದಲ್ಲಿ ವಾದಿಯ ವಿರುದ್ಧ ಎಸ್.ಸಿ. ನಂ.447/2019 ರಂತೆ ಇನ್ನೊಂದು ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ

ಪತ್ರ ಹಾಕಿ ವಾದಿಯ ಕಡೆಯಿಂದ ಹಣ ವಸೂಲು ಮಾಡಬೇಕು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**
**ಓ. ಹೇ. ಕೇ. ಸರಿ ಇದೆ,**

(ಪ್ರಶಾಂತಿ.ಜಿ)
**9ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು.**